ಕಂದಾಯ ಇಲಾಖೆ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ.ಪಹಣಿ/ವಿವಾದ/68/2014-15 ದಿನಾಂಕ:

ವಾದಿಗಳು

1. ಶ್ರೀಮತಿ ವನಜಾಕ್ಷಮ್ಮ ಗಂಡ ಹಾಲಪ್ಪ
2. ಶ್ರೀ ಆರ್ ಬಸವರೆಡ್ಡಿ ತಂದೆ ರೆಡ್ಡೆರ ಹಾಲಪ್ಪ
3. ಶ್ರೀ ಆರ್ ಹನುಮರೆಡ್ಡಿ ತಂದೆ ಲೇಟ್ ರೆಡ್ಡೆರ ಹಾಲಪ್ಪ
4. ಶ್ರೀ ಆರ್ ಸುರೇಶರೆಡ್ಡಿ ತಂದೆ ಲೇಟ್ ರೆಡ್ಡೆರ್ ಹಾಲಪ್ಪ
5. ಶ್ರೀ ಆರ್ ರಾಮರೆಡ್ಡಿ ತಂದೆ ರೆಡ್ಡೆರ ಹಾಲಪ್ಪ

ಪ್ರತಿವಾದಿಗಳು

1 ಶ್ರೀ ಭಿಮರೆಡ್ಡಿ ತಂದೆ ಪಕ್ಕೀರೆಡ್ಡಿ ಹಗರನೂರು

ಬಾಧಗ್ರಸ್ಥ ಜಮೀನಿನ ವಿವರ

| ಕ್ರಮ ಸಂಖ್ಯೆ | ಸರ್ವೆ ನಂಬರ | ವಿಸ್ತೀರ್ಣ | ಗ್ರಾಮದ ಹೆಸರು |
|---|---|---|---|
| 1 | 1)580ಬಿ ಪೈಕಿ<br>2)534 ಬಿ ಪೈಕಿ | 14.68<br>7.33 | ಮಾಗಳ<br>ಮಾಗಳ |

ಪೀಠಿಕೆ,

ಹಡಗಲಿ ತಾಲೂಕಿನ ಮಾಗಳ ಗ್ರಾಮದ ಸರ್ವೆ ನಂ 580ಬಿ ವಿಸ್ತೀರ್ಣ 14.68 ಮತ್ತು 534 ಬಿ ಪೈಕಿ ವಿಸ್ತೀರ್ಣ 7.33 ಎಕರೆ ಜಮೀನನ್ನು ನೊಂದಾಯಿತ ವಲ್ಲದ ಪಾಲು ವಿಬಾಗ ಪತ್ರ ದಿನಾಂಕ:20.09.2014 ಮೇರೆಗೆ ವಾದಿಯಾದ ಶ್ರೀಮತಿ ವನಜಾಕ್ಷಮ್ಮ ಇವರು ವಂಶವೃಕ್ಷ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸಿ ತಮ್ಮಗಳ ಹೆಸರಿಗೆ ಪಾಲುವಿಭಾಗದ ಪ್ರಕಾರ ಪಟ್ಟ ಬಡಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿದ ಮೇರಿಗೆ ಹಕ್ಕು ಬದಲಾವಣೆ ಸಂಖ್ಯೆ ಹೆಚ್ 42/2014-15 ರಲ್ಲಿ ನೊಂದಾಯಿಸಿಕೊಂಡು ಹಿತಾಸಕ್ತರಿಗೆ ನಮೂನೆ 21 ರಲ್ಲಿ ನೋಟೀಸ್ ಜಾರಿ ಮಾಡಲು ಕ್ರಮ ಜರುಗಿಸಿದಾಗ ಪ್ರತಿವಾದಿಗಳು ನಿಗಧಿತ ಅವದಿಯಲ್ಲಿ ತಕರಾರು ಸಲ್ಲಿಸಿರುತ್ತಾರೆ ಕಾರಣ ಕಂದಾಯ ನೀರೀಕ್ಷಕರು ಹೂವಿನಹಡಗಲಿ ಇವರು ಪ್ರಕರಣವನ್ನು ವಿವಾದಾಸ್ಪದ ವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 129ರಡಿಯಲ್ಲಿ ವಿಚಾರಣೆಗೆ ತೆಗೆದುಕೊಂಡು ವಾದಿ ಪ್ರತಿವಾದಿಗಳಿಗೆ ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ 19.02.2015 ರಂದು ಪ್ರಾರಂಬಿಸಿ 15.10.2015 ಕ್ಕೆ ಮುಕ್ತಾಯ ಗೋಳಿಸಲಾಯಿತು

ವಾದಿ ಮತ್ತು ಪ್ರತಿವಾದಿಗಳು ತಮ್ಮ ವಕೀಲರ ದ್ವಾರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಆದರೆ ಪ್ರಕರಣದಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ನೊಂದಾಯಿತವಲ್ಲದ ಪಾಲು ಪಟ್ಟಾವಿದ್ದು ವಿಳಂಬವಾದ ಕಾರಣ ಸರ್ಕಾರಿ ಆದೇಶ ಸಂಖ್ಯೆ ಆರ್ ಡಿ /11/ಟಿಆರ ಎಂ/2008 ದಿನಾಂಕ 03.12.2010 ಅನ್ವಯ ನೋಂದಾಯಿತ ವಲ್ಲದ ದಸ್ತವೇಜುಗಳನ್ನು ಪರಿಗಣಿಸಬಾರದೆಂಬ ನಿರ್ದೇಶನ ಇರುವ ಕಾರಣ ಈ ಕೆಳಕಂಡ

:-ಆದೇಶ-:

• ಪ್ರಕರಣದ ವಾಸ್ತುವಾಂಶ, ಹಿನ್ನೆಲೆ ಹಾಗೂ ದಾಖಾಲೆಗಳ ಮೇರಿಗೆ ವಾದಿಗಳು ನೋಂದಾಯಿತ ವಲ್ಲದ ಪಾಲು ವೀಭಾಗ ಪತ್ರವನ್ನು ಸಲ್ಲಿಸಿರುವುದರಿಂದ ವಾದಿ ಮತ್ತು ಪ್ರತಿವಾದಿಗಳು ಮಾಗಳ ಗ್ರಾಮದ ಸರ್ವೆ ನಂ 580ಬಿ ವಿಸ್ತೀರ್ಣ 14.68 ಮತ್ತು 534 ಬಿ ವಿಸ್ತೀರ್ಣ 7.33 ಎಕರೆ ಜಮೀನುಗಳ ಬಗ್ಗೆ ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 07.2016 ರಂದು ತೆರದ ನ್ಯಾಯಲಯದ್ಲಿ ಗೋಶಿಸಲಾಗಿದೆ

ತಹಶೀಲ್ದಾರರು
ಹಡಗಲಿ